## 2021 ಕ.ತೀ.ವ 1223

## ಸನ್ಮಾನ್ಯ ಮುಖ್ಯ ನ್ಯಾಯಮೂರ್ತಿ ಶ್ರೀ ಅಭಯ್ ಎಸ್. ಓಕಾ
## ಮತ್ತು
## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಸಚಿನ್ ಶಂಕರ್ ಮಗದುಮ್

## ಶ್ರೀ ವಿ. ಗುರುರಾಜ್ –ವಿರುದ್ಧ– ಶ್ರೀ ಶ್ರೀ ವಿದ್ಯಾ ಶ್ರೀಷ ತೀರ್ಥರು ಅಲಿಯಾಸ್ ಶ್ರೀ ಡಿ. ಪ್ರಹ್ಲಾದಾಚಾರ್*

**ಪ್ರಸ್ತುತ ಮೊಕದ್ದಮೆಯಲ್ಲಿನ ಅರ್ಜಿದಾರನು, ತನ್ನ ಮೊಕದ್ದಮೆಯನ್ನು ಕರ್ನಾಟಕದ ಹೊರಗಿನ ಯಾವುದಾದರೂ ನ್ಯಾಯಾಧೀಶರ ಮುಂದೆ ನೀಡಲು ನಿರ್ದೇಶನ ಕೋರಿರುತ್ತಾನೆ.**

**ನಂತರ, ಈ ರಿಟ್ ಅರ್ಜಿಯನ್ನು ವಾಪಸ್ ತೆಗೆದುಕೊಳ್ಳಲು ಮನವಿಯನ್ನು ಸಲ್ಲಿಸಿರುತ್ತಾನೆ.**

**ಈ ಮೊಕದ್ದಮೆಯಲ್ಲಿರುವ ವಿಶಿಷ್ಟ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಮತ್ತು ನ್ಯಾಯಾಲಯದ ಸಮಯವನ್ನು ವ್ಯಯಿಸಿದ್ದಕ್ಕಾಗಿ ರಿಟ್ ಅರ್ಜಿದಾರನಿಗೆ ರೂ.1,00,000/- ರೂಪಾಯಿಗಳ ದಂಡವನ್ನು ವಿಧಿಸಿ, ರಿಟ್ ಅರ್ಜಿಯನ್ನು ವಾಪಾಸ್ ತೆಗೆದುಕೊಳ್ಳಲು ಅನುಮತಿ ನೀಡಲಾಗಿದೆ.**

***ಉಲ್ಲೇಖಿಸಲಾದ ಮೊಕದ್ದಮೆಗಳು*** ***ಪ್ಯಾರಾಗಳಲ್ಲಿ***

*1. (1978) 3 ಎಸ್‌ಸಿಸಿ 339*
*ಇನ್ ರೆ ಎಸ್. ಮುಲಗಾಂವ್‌ಕರ್* *(ಉಲ್ಲೇಖ) 10*

*2. (1968) 2 ಡಬ್ಲ್ಯೂಎಲ್‌ಆರ್ 1204*
*ರೆಜಿನಾ –ವಿರುದ್ಧ– ಮೆಟ್ರೊಪಾಲಿಟನ್*
*ಪೊಲೀಸ್ ಕಮಿಷನರ್ ಎಕ್ಸ್.ಪಿ. ಬ್ಲಾಕ್‌ಬರ್ನ್* *(ಉಲ್ಲೇಖ) 10*

*ರಿಟ್ ಅರ್ಜಿ ಸಂಖ್ಯೆ: 44/2021 (ಜಿಎಮ್–ಆರ್‌ಇಎಸ್), ದಿನಾಂಕ: 12ನೇ ಜನವರಿ, 2021

*3. (1977) 4 ಎಸ್‌ಸಿಸಿ 467*
*ಟಿ. ಅರಿವಂದಂದಮ್ –ವಿರುದ್ಧ–*
*ಟಿ.ವಿ. ಸತ್ಯಪಾಲ್ ಮತ್ತು ಇನ್ನೊಬ್ಬರು (ಉಲ್ಲೇಖ) 14*

ಅರ್ಜಿದಾರನ ಪರ : ಶ್ರೀ ಕುಮಾರ ಕೆ.ಜಿ., ವಕೀಲರು.

**ಆದೇಶ**

**ಮುಖ್ಯ ನ್ಯಾಯಮೂರ್ತಿ ಶ್ರೀ ಅಭಯ್ ಎಸ್. ಓಕಾ:**

ಅರ್ಜಿದಾರನ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಗಳು, ಈ ಅರ್ಜಿಯನ್ನು ಹಿಂತೆಗೆದುಕೊಳ್ಳುವುದಕ್ಕಾಗಿ ಒಂದು ಜ್ಞಾಪನಪತ್ರವನ್ನು ನ್ಯಾಯಾಲಯದ ಮುಂದೆ ಸಲ್ಲಿಸಿದ್ದಾರೆ. ನಾವು ಅರ್ಜಿಯನ್ನು ಹಿಂತೆಗೆದುಕೊಳ್ಳಲು ಅನುಮತಿ ನೀಡಿದಾಗ್ಯೂ, ಈ ಅರ್ಜಿಯಲ್ಲಿ ಮಾಡಿದ ಆಪಾದನೆಗಳ ಸ್ವರೂಪವನ್ನು ನೋಡಿದರೆ, ಅದು ನಿರೂಪಾದಿಕವಾಗಿರಬಾರದು.

2. ಪ್ರಸ್ತುತ ಅರ್ಜಿದಾರನು, ರಿಟ್ ಅರ್ಜಿ ಸಂಖ್ಯೆ: 15239/2020ರಲ್ಲಿ ಎರಡನೇ ಪ್ರತ್ಯರ್ಜಿದಾರನಾಗಿದ್ದು, ಸದರಿ ಅರ್ಜಿಯಲ್ಲಿನ ಇದೇ ಮಾನ್ಯ ನ್ಯಾಯವಾದಿಗಳು ಆತನನ್ನು ಪ್ರತಿನಿಧಿಸಿದ್ದಾರೆ. ದಿನಾಂಕ: 23ನೇ ಡಿಸೆಂಬರ್, 2020ರಂದು ಮಾನ್ಯ ಏಕಪೀಠ ನ್ಯಾಯಾಧೀಶರ ಮುಂದೆ ಸದರಿ ರಿಟ್ ಅರ್ಜಿ ಸಂಖ್ಯೆ: 15239/2020 ಬಂದಾಗ, ಈ ಅರ್ಜಿಯಲ್ಲಿನ ಅರ್ಜಿದಾರರ ಪರ ಹಾಜರಾದ ಮಾನ್ಯ ನ್ಯಾಯವಾದಿಗಳು ಒಂದು ಅತ್ಯಂತ ವಿಲಕ್ಷಣ ಮನವಿಯನ್ನು ಮಾಡಿಕೊಂಡಿದ್ದರು. ಆ ಮನವಿಯು ವಿಲಕ್ಷಣ ಮಾತ್ರವಲ್ಲದೆ, ಆಘಾತಕಾರಿ ಕೂಡಾ ಆಗಿತ್ತು. ಈ ನ್ಯಾಯಾಲಯದ ಕರ್ನಾಟಕದವರಲ್ಲದ ನ್ಯಾಯಾಧೀಶರು ಈ ವಿಷಯವನ್ನು ಆಲಿಸಬೇಕೆಂದು ಮತ್ತು ಈ ಸಂಬಂಧದಲ್ಲಿ ನಿರ್ಣಯ ಕೈಗೊಳ್ಳಬೇಕೆಂದು ಮಾನ್ಯ ಮುಖ್ಯ ನ್ಯಾಯಾಧೀಶರಲ್ಲಿ ಮನವಿ ಮಾಡಿಕೊಳ್ಳಲು ಪ್ರಸ್ತುತ ಅರ್ಜಿದಾರನು ಬಯಸಿದ್ದನೆಂಬುದು ಆ ಮನವಿಯಾಗಿತ್ತು. 23ನೇ ಡಿಸೆಂಬರ್, 2020ರ ಆದೇಶ ಈ ಮುಂದಿನಂತಿದೆ:

"2ನೇ ಪ್ರತಿವಾದಿ ಪರ ಹಾಜರಾದ ಮಾನ್ಯ ನ್ಯಾಯವಾದಿ ಶ್ರೀ ಕುಮಾರ ಕೆ.ಜಿ.ಯವರು ಈ ವಿಷಯವನ್ನು ಈ ನ್ಯಾಯಾಲಯದ ಕರ್ನಾಟಕದವರಲ್ಲದ ನ್ಯಾಯಾಧೀಶರು ಆಲಿಸಬೇಕೆಂದು ಮತ್ತು ಈ ಸಂಬಂಧದಲ್ಲಿ ನಿರ್ಣಯವನ್ನು ಕೈಗೊಳ್ಳಬೇಕೆಂದು ಮಾನ್ಯ ಮುಖ್ಯ ನ್ಯಾಯಾಧೀಶರಿಗೆ ಮನವಿ ಮಾಡಿಕೊಳ್ಳಲಾಗಿದೆ ಎಂದು ನಿವೇದಿಸಿಕೊಂಡಿರುತ್ತಾರೆ.

*ಮೇಲಿನ ಸಂಗತಿಯ ಹಿನ್ನೆಲೆಯಲ್ಲಿ, ವಿಷಯವನ್ನು ನಾಲ್ಕು ವಾರಗಳಿಗಾಗಿ ಮುಂದೂಡಲಾಯಿತು; ಈ ನಡುವೆ, ಅಧಿವಿಚಾರಣಾ ನ್ಯಾಯಾಲಯದಲ್ಲಿನ ವ್ಯವಹರಣೆಗಳನ್ನು ತ್ವರಿತಗೊಳಿಸತಕ್ಕದ್ದಲ್ಲ.*

*ಅಧಿವಿಚಾರಣಾ ನ್ಯಾಯಾಲಯದಲ್ಲಿ ಮೊದಲನೇ ಪ್ರತಿವಾದಿಗೆ ಅರ್ಜಿಯ ಪ್ರತಿಯನ್ನು ನೀಡಲು ಅರ್ಜಿದಾರನು ಮುಕ್ತನಿದ್ದಾನೆ; ಮಾನ್ಯ ಅಧಿವಿಚಾರಣಾ ನ್ಯಾಯಾಧೀಶರರು ಅಂಥ ಅವಕಾಶಕ್ಕೆ ಅನುಕೂಲ ಕಲ್ಪಿಸುವುದು."*

(ಗೆರೆ ಹಾಕಿದ್ದಕ್ಕೆ ಒತ್ತು ನೀಡಲಾಗಿದೆ)

3. ಅದಕ್ಕೆ ಮೊದಲು, ಅತ್ಯಂತ ವಿಲಕ್ಷಣ ಪರಮಾದೇಶದ (ಮ್ಯಾಂಡಮಸ್) ರಿಟ್ ಕೋರಿ 22ನೇ ಡಿಸೆಂಬರ್, 2020ರಂದು ಪ್ರಸ್ತುತ ಅರ್ಜಿಯನ್ನು ಸಲ್ಲಿಸಿರುವುದು ಕಂಡುಬರುತ್ತದೆ. ಈ ಅರ್ಜಿಯ (1)ನೇ ಮನವಿಯನ್ನು ಈ ಕೆಳಗಿನಂತೆ ಓದಲಾಗಿದೆ:

*"1. ಉಚ್ಚ ನ್ಯಾಯಾಲಯ ನಿಯಮಗಳು, 1959ರ IIನೇ ಅಧ್ಯಾಯದ 6ನೇ ನಿಯಮದ ಮೇರೆಗೆ ನಿಹಿತವಾದ ಅಧಿಕಾರಗಳನ್ನು ಚಲಾಯಿಸಿ, ಈ ನ್ಯಾಯಾಲಯಕ್ಕಾಗಲಿ (ಎಂದರೆ, ಮುಖ್ಯ ನ್ಯಾಯಮೂರ್ತಿಗಳು ರಚಿಸಿದ ನ್ಯಾಯಪೀಠ) ಅಥವಾ ಕರ್ನಾಟಕವನ್ನು ಹೊರತುಪಡಿಸಿ ಬೇರೆ ರಾಜ್ಯದಿಂದ ಆಗಮಿಸಿರುವ ನ್ಯಾಯಾಧೀಶರು ರಚಿಸಿದ ಯಾವುದೇ*

*ಇತರ ನ್ಯಾಯಾಲಯಕ್ಕಾಗಲಿ, ರಿಟ್ ಅರ್ಜಿ ಸಂಖ್ಯೆ: 15239/2020ನ್ನು ನೀಡುವುದು."*

(ಗೆರೆಹಾಕಿದ್ದಕ್ಕೆ ಒತ್ತು ನೀಡಲಾಗಿದೆ)

4. ಹಾಗಾಗಿ, ಮಾನ್ಯ ಮುಖ್ಯ ನ್ಯಾಯಾಧೀಶರನ್ನು ಒಳಗೊಂಡ ಪೀಠವು ಅಥವಾ ಕರ್ನಾಟಕವನ್ನು ಹೊರತುಪಡಿಸಿ ಬೇರೆ ರಾಜ್ಯದಿಂದ ಆಗಮಿಸಿರುವ ನ್ಯಾಯಾಧೀಶರನ್ನು ಒಳಗೊಂಡಿರುವ ಯಾವುದೇ ಇತರ ಪೀಠವು ರಿಟ್ ಅರ್ಜಿಯನ್ನು ವಿಚಾರಣೆ ಮಾಡಬೇಕೆಂಬ ಮಟ್ಟಿಗೆ ಪರಮಾದೇಶದ ರಿಟ್‌ಅನ್ನು ಕೋರಲಾಗಿದೆ.

5. ಈ ಅರ್ಜಿಯಲ್ಲಿ ಮಾಡಿದ ವಾದಗಳು, ನ್ಯಾಯಾಲಯಗಳ ನಿಂದನೆ ಅಧಿನಿಯಮ, 1971ರಲ್ಲಿ (ಸಂಕ್ಷಿಪ್ತವಾಗಿ '1971ರ ಸದರಿ ಅಧಿನಿಯಮ') ಪರಿಭಾಷಿಸಿದಂತೆ, ಈ ನ್ಯಾಯಾಲಯದ ಅಪರಾಧಿಕಾ (ಕ್ರಿಮಿನಲ್) ನಿಂದನೆಯಾಗಿರುವ ನ್ಯಾಯಾಲಯವನ್ನು ದೂಷಿಸುವ ಅತ್ಯುತ್ತಮ ಉದಾಹರಣೆಯಾಗಿದೆ. ಅರ್ಜಿಯ 4ನೇ ಕಂಡಿಕೆಯಲ್ಲಿ ನಿರ್ದಿಷ್ಟವಾಗಿ ಹೆಸರಿಸಿರುವ ಭಾರತದ ಹಿಂದಿನ ಮುಖ್ಯ ನ್ಯಾಯಾಧೀಶರಿಂದ ಅತ್ಯಧಿಕ ಹಸ್ತಕ್ಷೇಪವಾಗಿದೆ ಎಂಬ ಆಧಾರದ ಮೇಲೆ ರಿಟ್ ಅರ್ಜಿ ಸಂಖ್ಯೆ: 15239/2020ರಲ್ಲಿ ಎರಡನೇ ಪ್ರತಿವಾದಿಯಾಗಿರುವ ಅರ್ಜಿದಾರನಿಗೆ ರೋಸ್ಟರ್ ನ್ಯಾಯಾಧೀಶರು ನ್ಯಾಯ ನೀಡುವುದಿಲ್ಲ ಎಂಬುದು ಅತ್ಯಂತ ನಿರ್ದಿಷ್ಟವಾದ ಮೊದಲನೇ ಆರೋಪವಾಗಿದೆ. ನಾವು ಉದ್ದೇಶಪೂರ್ವಕವಾಗಿಯೇ ಹಿಂದಿನ ಮುಖ್ಯ ನ್ಯಾಯಾಧೀಶರ ಹೆಸರನ್ನು ಉಲ್ಲೇಖಿಸಿರುವುದಿಲ್ಲ. ವಿಷಯವು ಇಲ್ಲಿಗೆ ನಿಲ್ಲುವುದಿಲ್ಲ. ಪ್ರತಿಯೊಂದು ಕಂಡಿಕೆಗಳಲ್ಲೂ, ಭಾರತದ ಹಿಂದಿನ ನ್ಯಾಯಾಧೀಶರ ವಿರುದ್ಧ ಅವರ ಹೆಸರನ್ನು ಪದೇ ಪದೇ ಉಲ್ಲೇಖಿಸಿ, ಅವರ ವಿರುದ್ಧ ನಿರಂತರವಾಗಿ ಆರೋಪಗಳನ್ನು ಮಾಡಲಾಗಿದೆ. ರಿಟ್ ಅರ್ಜಿಯ 8ನೇ ಕಂಡಿಕೆಯನ್ನು ಈ ಕೆಳಗಿನಂತೆ ಓದಲಾಗಿದೆ:

*"8. ಈ ಅರ್ಜಿದಾರನ ಬಲವಾದ ಕಾರಣದಿಂದ ಕೂಡಿದ ಆತಂಕದ ಪ್ರಕಾರ, ನ್ಯಾಯಾಲಯ ಕೊಠಡಿ ಸಂಖ್ಯೆ: 15ರ ಅಥವಾ ಭಾರತದ*

> *ಹಿಂದಿನ ಮುಖ್ಯ ನ್ಯಾಯಾಧೀಶರಾಗಿದ್ದ ಶ್ರೀ xxxxxxxxxರವರ ಬಗ್ಗೆ ನಿಶ್ಚಿತ ಕಾರಣಗಳಿಗಾಗಿ ನಿಕಟ ಸಾಮಿಪ್ಯ, ನಿಷ್ಠೆ ಮತ್ತು ಗೌರವಾದರ ಹೊಂದಿರುವ, ಕರ್ನಾಟಕ ನ್ಯಾಯಾಲಯದಿಂದ ನ್ಯಾಯಾಧೀಶರಾಗಿರುವ ಯಾವುದೇ ಇತರ ನ್ಯಾಯಾಲಯದ ಮುಂದೆ ಮೊಕದ್ದಮೆಯನ್ನು ದಾಖಲಿಸುವ ಮೂಲಕ ಬಾಧಿತರಾಗಿದ್ದು, ಸದರಿ ಘೋಷಣೆಗಳು ಪ್ರಸ್ತುತ ಮೊಕದ್ದಮೆಗಳ ವಿಲೆಯಲ್ಲಿ ನ್ಯಾಯಯುತ ಫಲಿತಾಂಶಗಳನ್ನು ಪಡೆಯಲಾಗುವುದಿಲ್ಲ. ಯಾವುದೇ ಇತರ ಪರ್ಯಾಯವಿಲ್ಲದೆ, ಅರ್ಜಿದಾರನು, ಇತರ ಕಾರಣಗಳೊಂದಿಗೆ ಈ ಮುಂದಿನ ಕಾರಣಗಳ ಮೇರೆಗೆ ಈ ಮಾನ್ಯ ನ್ಯಾಯಾಲಯವನ್ನು ಸಂಪರ್ಕಿಸಿದ್ದಾನೆ."*
>
> *(ಗೆರೆ ಹಾಕಿದ್ದಕ್ಕೆ ಒತ್ತು ನೀಡಲಾಗಿದೆ)*

6. 8ನೇ ಕಂಡಿಕೆಯನ್ನು ಪುನರುಚ್ಚರಿಸುವಾಗ, ಭಾರತದ ಹಿಂದಿನ ಮಾನ್ಯ ಮುಖ್ಯ ನ್ಯಾಯಾಧೀಶರ ಹೆಸರನ್ನು ನಾವು ಉದ್ದೇಶಪೂರ್ವಕವಾಗಿಯೇ ಮರೆಮಾಚಿದ್ದೇವೆ. 10ನೇ, 11ನೇ ಮತ್ತು 13ನೇ ಕಂಡಿಕೆಗಳನ್ನು ಈ ಕೆಳಗಿನಂತೆ ಓದಲಾಗಿದೆ:

> *"10. ಮಾನ್ಯ ನ್ಯಾಯಾಲಯದ ಮೇಲೆ ಸಂಶಯ ಹೊರಿಸಲು ಪ್ರತಿವಾದಿಗಳು ಉದ್ದೇಶಪೂರ್ವಕವಾಗಿ ಈ ಕೆಳಗಿನಂತೆ ಹೇಳಿದ್ದಾರೆ ಎಂಬುದು ಅರ್ಜಿದಾರರ ಬಲವಾದ ಗ್ರಹಿಕೆಯಾಗಿದೆ ಎಂದು ನಿವೇದಿಸಿಕೊಳ್ಳಲಾಗಿದೆ:*
>
> *"ಕರ್ನಾಟಕ ಸರ್ಕಾರವು, ಸ್ವತ್ತುಗಳ ಮತ್ತು ಸಾರ್ವಜನಿಕ ನಿಧಿಗಳ ದುರ್ಬಳಕೆಯನ್ನೂ ಒಳಗೊಂಡು, ಅಕೃತ್ಯ ಮತ್ತು ದುರಾಡಳಿತ ಕುರಿತು ವಿಚಾರಣೆ ನಡೆಸಿದ ನಂತರ, ಶ್ರೀ ವ್ಯಾಸರಾಜ ಮಠದ (ಸೋಸಲೆ) ವ್ಯವಹಾರಿಕ ವಿಷಯದ ನಿರ್ವಹಣೆಗಾಗಿ ನಿವೃತ್ತ*

*ಐಎಎಸ್ ಅಧಿಕಾರಿಯನ್ನು ಆಡಳಿತಗಾರನನ್ನಾಗಿ ನೇಮಿಸುವುದು ಸೂಕ್ತವೆಂದು ಯೋಚಿಸಿ, ಹಾಗೆ ನಿರ್ಣಯಿಸಿದೆ. ತದನುಸಾರವಾಗಿ, ದಿನಾಂಕ: 25.5.2012ರಂದು ಒಂದು ಆದೇಶವನ್ನು ಹೊರಡಿಸಿ, ಅಂದಿನ ಭಾರತದ ಹಿಂದಿನ ಮುಖ್ಯ ನ್ಯಾಯಾಧೀಶರು ಮುಖ್ಯಸ್ಥರಾಗಿರುವ ಸಲಹಾ ಮಂಡಳಿಯನ್ನು ಸಹ ರಚಿಸಲಾಯಿತು. ಅಧಿಸೂಚನೆಗಳ ಪ್ರತಿಗಳನ್ನು ಕ್ರಮವಾಗಿ ಎ ಮತ್ತು ಬಿ ಅನುಬಂಧಗಳಲ್ಲಿ ಹಾಜರುಪಡಿಸಲಾಗಿದೆ."*

*11. ಮೇಲಿನ ಸ್ಪಷ್ಟೋಚ್ಚಾರಣೆಯನ್ನು ಓದಿದ ಮಾತ್ರದಿಂದಲೇ, ಸದರಿ ಕಂಡಿಕೆಯು, ರಿಟ್ ಅರ್ಜಿಯ ಮುಂದಿನ ಅಂಶಗಳೊಂದಿಗೆ ಯಾವುದೇ ಸಂಬಂಧವನ್ನು ಹೊಂದಿರುವುದಿಲ್ಲ ಅಥವಾ ದಸ್ತಾವೇಜು ಮಾನ್ಯ ನ್ಯಾಯಾಲಯದ ಮುಂದಿರುವ ಅನುಬಂಧದ ಮುಖ್ಯ ಭಾಗವನ್ನು ರೂಪಿಸುವುದಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಆದರೆ, ಕರ್ನಾಟಕದ ನ್ಯಾಯಾಲಯಗಳಿಂದ ಬಂದಿರುವ ಬಹುತೇಕ ನ್ಯಾಯಾಧೀಶರು, ಹಿಂದಿನ ಮುಖ್ಯ ನ್ಯಾಯಾಧೀಶರಾದ ಶ್ರೀ XXXXXX ಅವರ ನಿರ್ವಿವಾದಿತ ಬುದ್ಧಿಶಕ್ತಿಗೆ ತಲೆಬಾಗಿದ್ದು, ಅವರ ಪ್ರಬಲವಾದ ಪ್ರಭಾವವನ್ನು ನಿಯಂತ್ರಿಸುವ ಮತ್ತು ಅವರಲ್ಲಿರುವ ಗೌರವಾದಾರಗಳನ್ನು ಬಳಸಿಕೊಳ್ಳುವ ಸಲುವಾಗಿ, ಸದರಿ ವಸ್ತುವಿಷಯದಲ್ಲಿ ಇಂಥ ಸ್ಪಷ್ಟೋಚ್ಚಾರಣೆಗಳನ್ನು ಒಳಗೊಳ್ಳಲಾಗಿದೆ ಎಂಬ ಪ್ರಬಲ ಆತಂಕವಿದೆ."*

*"13. ಕರ್ನಾಟಕ ನ್ಯಾಯಾಲಯದಿಂದ ಬಂದಿರುವ ಬಹುತೇಕ ನ್ಯಾಯಾಧೀಶರು, ಒಂದಲ್ಲ ಒಂದು ರೀತಿಯಲ್ಲಿ, ಭಾರತದ ಹಿಂದಿನ ಮುಖ್ಯ ನ್ಯಾಯಾಧೀಶರಾದ ಶ್ರೀ XXXXXX ಅವರ ಬಗ್ಗೆ ತಮ್ಮ ನಿಷ್ಠೆಯನ್ನು ಹೊಂದಿದ್ದಾರೆ ಮತ್ತು ತಮ್ಮ ಗೌರವಾದರಗಳನ್ನು ತೋರಿಸುತ್ತಾರೆ ಎಂಬುದು ಈ ಅರ್ಜಿದಾರನ ಆತಂಕಕ್ಕೆ ಪ್ರಬಲ*

*ಕಾರಣವಾಗಿದೆ. ಆದುದರಿಂದ, ಮೇಲಿನ ಮೊಕದ್ದಮೆಯಲ್ಲಿ ಅರ್ಜಿದಾರನ ಸಹಜ ನ್ಯಾಯವನ್ನು ರಕ್ಷಿಸಲು, ಪ್ರಸ್ತುತ ಅರ್ಜಿಯು ಅನಿವಾರ್ಯವಾಗಿದೆ. ಅಲ್ಲದೆ, ಪೂರ್ವಗ್ರಹದ ಹೋಲಿಕೆಯು ಸಹ ಸಹಜ ನ್ಯಾಯ ತತ್ತ್ವಕ್ಕೆ ವಿರುದ್ಧವಾಗಿದೆ ಎಂಬುದು ಕಾನೂನಿನ ಇತ್ಯರ್ಥಗೊಂಡ ನಿಲುವಾಗಿದೆ."*

ಪುನಃ 13ನೇ ಕಂಡಿಕೆಯನ್ನು ಉಲ್ಲೇಖಿಸುವಾಗ, ಭಾರತದ ಹಿಂದಿನ ಮುಖ್ಯ ನ್ಯಾಯಾಧೀಶರ ಹೆಸರನ್ನು ನಾವು ಮರೆಮಾಚಿದ್ದೇವೆ.

7. ಮಧ್ಯಂತರ ಪರಿಹಾರಕ್ಕಾಗಿ ನೀಡಿದ ಕಾರಣಗಳಲ್ಲಿಯೂ ಸಹ, ಇವೇ ಆಪಾದನೆಗಳನ್ನು ಪುನರುಚ್ಚರಿಸಲಾಗಿದೆ. ಸಂಕ್ಷಿಪ್ತವಾಗಿ ಹೇಳುವುದಾರೆ, ಕರ್ನಾಟಕದ ನ್ಯಾಯಾಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಈ ನ್ಯಾಯಾಲಯದ ಎಲ್ಲಾ ನ್ಯಾಯಾಧೀಶರು, ಭಾರತದ ಹಿಂದಿನ ಮುಖ್ಯ ನ್ಯಾಯಾಧೀಶರಿಂದ ಪ್ರಭಾವಿತರಾಗಿರಬಹುದಾದ್ದರಿಂದ, ಮಾನ್ಯ ಮುಖ್ಯ ನ್ಯಾಯಮೂರ್ತಿಗಳು ವಿಷಯವನ್ನು ಸ್ವತಃ ವಿಚಾರಣೆಗಾಗಿ ಕೈಗೆತ್ತಿಕೊಳ್ಳಬೇಕು ಅಥವಾ ಕರ್ನಾಟಕದ ನ್ಯಾಯಾಲಯಗಳಲ್ಲಿ ಕಾರ್ಯನಿರ್ವಹಿಸದ ನ್ಯಾಯಾಧೀಶರಿಗೆ ವಿಷಯವನ್ನು (ರಿಟ್ ಅರ್ಜಿ ಸಂಖ್ಯೆ: 15239/ 2020) ವರ್ಗಾಯಿಸಬೇಕು ಎಂಬುದು ಅರ್ಜಿದಾರನು ತನ್ನ ಅಫಡಾವಿಟ್‌ನಿಂದ ಸಮರ್ಥಿಸಿರುವ ಆರೋಪಗಳಾಗಿವೆ. ಹೊರನೋಟದಿಂದಲೇ, ಇಂಥ ಆರೋಪಗಳು ಕರ್ನಾಟಕ ಉಚ್ಚ ನ್ಯಾಯಾಲಯವನ್ನು ವಿವಾದಕ್ಕೀಡು ಮಾಡಿವೆ ಮತ್ತು ಈ ನ್ಯಾಯಾಲಯದ ಪ್ರಾಧಿಕಾರವನ್ನು ಅಗೌರವಗೊಳಿಸುವಂಥವಾಗಿವೆ. ಇದಲ್ಲದೆ, ಇಂಥ ಆಪಾದನೆಗಳು, ನ್ಯಾಯಿಕ ಪ್ರಕ್ರಿಯೆಗಳ ಸಹಜ ಕ್ರಮದಲ್ಲಿ ಹಸ್ತಕ್ಷೇಪವನ್ನುಂಟು ಮಾಡುತ್ತವೆ. ಇಂಥ ಆಪಾದನೆಗಳು ನ್ಯಾಯಾಡಳಿತದಲ್ಲಿ ಹಸ್ತಕ್ಷೇಪ ಮಾಡುವ ಪ್ರವೃತ್ತಿಯವಾಗಿವೆ.

8. ನಿನ್ನೆ, ಈ ಅರ್ಜಿಯನ್ನು ನ್ಯಾಯಾಲಯದ ಮುಂದೆ ಪಟ್ಟಿ ಮಾಡಿದಾಗ, 1971ರ ಸದರಿ ಅಧಿನಿಯಮದ ಅಡಿಯಲ್ಲಿ ಅಪರಾಧಿಕಾ ನಿಂದನೆಗಾಗಿ

ಸ್ವಯಂಪ್ರೇರಣೆಯಿಂದ ನೇರವಾಗಿ ವ್ಯವಹರಣೆಗಳನ್ನು ಪ್ರಾರಂಭಿಸುವುದಕ್ಕೆ ಬದಲಾಗಿ, ಈ ನ್ಯಾಯಾಲಯವು, ಈ ಅರ್ಜಿಯಲ್ಲಿ ಮಾಡಿದ ಈ ವಿವಾದಾತ್ಮಕ ಆಪಾದನೆಗಳೆಡೆಗೆ ಅರ್ಜಿದಾರನ ಪರ ಹಾಜರಾದ ಮಾನ್ಯ ನ್ಯಾಯವಾದಿಗಳ ಗಮನ ಸೆಳೆಯಿತು. ಅರ್ಜಿದಾರನ ಪರ ಹಾಜರಾದ ಮಾನ್ಯ ನ್ಯಾಯವಾದಿಗಳು ಆ ತರುವಾಯ ಸಮಯ ಕೋರಿದ್ದರು. ವಿಶೇಷಾಧಿಕಾರದ ಮೂಲಕ ಮಾತ್ರವೇ ಆ ಸಮಯಾವಕಾಶ ನೀಡಲಾಗಿತ್ತು ಎಂದು ದಾಖಲಿಸಿ, ನಾವು ಇಂದಿನವರೆಗೆ ಸಮಯ ನೀಡಿದ್ದೆವು.

9. ನಿರೀಕ್ಷಿಸಿದಂತೆ, ಇಂದು ಈ ಅರ್ಜಿಯನ್ನು ಸುನಾವಣೆ ಮಾಡದಿರುವುದನ್ನು ಖಚಿತಪಡಿಸಿಕೊಳ್ಳಲು ಅರ್ಜಿದಾರನು ವಿಳಂಬ ತಂತ್ರವನ್ನು ಅನುಸರಿಸಲು ಪ್ರಯತ್ನಿಸಿದ್ದನು. ಇಂದು ಮೊಕದ್ದಮೆಯನ್ನು ಸುನಾವಣೆಗೆ ಕರೆದ ನಂತರ, ಅರ್ಜಿದಾರನ ಪರ ಹಾಜರಾದ ಮಾನ್ಯ ನ್ಯಾಯವಾದಿಗಳು, ಹಿಂದೆ ಸರಿಯಲು ಜ್ಞಾಪನಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ, ರಿಟ್ ಅರ್ಜಿಯಲ್ಲಿ ತಾನು ಮುಂದುವರಿಯುವುದಿಲ್ಲವೆಂದು ಅರ್ಜಿದಾರನಿಗೆ ತಿಳಿಸಿರುವುದಾಗಿ ಹಾಗೂ ಕಡತವನ್ನು ಮತ್ತು ನಿರಾಕ್ಷೇಪಣೆಯನ್ನು ಪಡೆದುಕೊಳ್ಳಲು ಅರ್ಜಿದಾರನಿಗೆ ತಾನು ಹೇಳಿರುವುದಾಗಿ ಹೇಳಿಕೆ ನೀಡಿದ್ದಾರೆ. ಈ ಜ್ಞಾಪನಪತ್ರವನ್ನು ಇಂದು ಬೆಳಿಗ್ಗೆ 10.30 ಗಂಟೆಗೆ ಹಾಜರುಪಡಿಸಿದಾಗ, 1908ರ ಸಿವಿಲ್ ಪ್ರಕ್ರಿಯಾ ಸಂಹಿತೆಯ IIIನೇ ಕ್ರಮಾದೇಶದ 4ನೇ ನಿಯಮದ (2)ನೇ ಉಪ–ನಿಯಮದ ಉಪಬಂಧಗಳ ಕಡೆಗೆ ನಾವು ಅರ್ಜಿದಾರನ ಪರ ಹಾಜರಾದ ಮಾನ್ಯ ನ್ಯಾಯವಾದಿಗಳ ಗಮನ ಸೆಳೆದು, ಹಿಂದೆ ಸರಿಯಲು ಅಥವಾ ಹಿಂದೆ ಸರಿಯದಿರಲು ನ್ಯಾಯವಾದಿಗೆ ಅನುಮತಿ ನೀಡುವುದು ನ್ಯಾಯಾಲಯದ ವಿವೇಚನೆಗೆ ಬಿಟ್ಟ ವಿಷಯವಾಗಿದೆ ಎಂಬ ಅಂಶವನ್ನು ಅರ್ಜಿದಾರನ ಪರ ಹಾಜರಾದ ಮಾನ್ಯ ನ್ಯಾಯವಾದಿಗೆ ನಾವು ಸೂಚಿಸಿದೆವು. ಆದುದರಿಂದ, ಈ ನ್ಯಾಯಾಲಯದಲ್ಲಿ ನಿಹಿತವಾಗಿರುವ ವಿವೇಚನಾಧಿಕಾರವನ್ನು ಚಲಾಯಿಸಿ, ಹಿಂದೆ ಸರಿಯಲು ಸದರಿ ನ್ಯಾಯವಾದಿಗೆ ನಾವು ಅನುಮತಿ ನೀಡುವುದಿಲ್ಲ ಎಂದು ಅವರಿಗೆ ಅತ್ಯಂತ ಸ್ಪಷ್ಟವಾಗಿ ನಾವು ಮನವರಿಕೆ ಮಾಡಿಕೊಟ್ಟಿದ್ದೇವೆ. ಆದುದರಿಂದ, ಈ ಮುಂದಿನ ಹೇಳಿಕೆಗಳನ್ನು ಒಳಗೊಂಡಿರುವ ಹಿಂಪಡೆಯುವ ಜ್ಞಾಪನಪತ್ರವನ್ನು

ಅರ್ಜಿದಾರನ ಪರ ಹಾಜರಾದ ಮಾನ್ಯ ನ್ಯಾಯವಾದಿಗಳು ಸಲ್ಲಿಸಿದಾಗ, ಬೆಳಿಗ್ಗೆ 11.15ಕ್ಕೆ ರಿಟ್ ಅರ್ಜಿಯನ್ನು ಕೈಬಿಡಲಾಯಿತು:

> *"ಕೆಳಗೆ ಸಹಿ ಮಾಡಿದ ಅರ್ಜಿದಾರನ ಪರ ಹಾಜರಾದ ಮಾನ್ಯ ನ್ಯಾಯವಾದಿಯಾದ ನಾನು, ಈ ಮಾನ್ಯ ನ್ಯಾಯಾಲಯದ ಮುಂದೆ ಗೌರವಪೂರ್ವಕವಾಗಿ ನಿವೇದಿಸಿಕೊಳ್ಳುವುದೇನೆಂದರೆ, ನ್ಯಾಯ ಮತ್ತು ನಿಷ್ಪಕ್ಷಪಾತದ ಹಿತಾಸಕ್ತಿಯಲ್ಲಿ ರಿಟ್ ಅರ್ಜಿಯನ್ನು ಮುಂದಿಟ್ಟಿಲ್ಲವೆಂಬಂತೆ ಅದನ್ನು ಹಿಂತೆಗೆದುಕೊಳ್ಳಲು ನನಗೆ ಅನುಮತಿ ನೀಡಲು ಕೋರುತ್ತೇನೆ."*

10. ಈ ಹಿಂದೆ ಅಭಿಪ್ರಾಯಪಟ್ಟಿರುವಂತೆ, ಈ ರಿಟ್ ಅರ್ಜಿಯಲ್ಲಿ ಅರ್ಜಿದಾರನು ನೀಡಿದ ಹೇಳಿಕೆಗಳು, ಸ್ಪಷ್ಟವಾಗಿ, 1971ರ ಸದರಿ ಅಧಿನಿಯಮದ 2ನೇ ಪ್ರಕರಣದ (ಸಿ) ಖಂಡದ ಎಲ್ಲಾ ಮೂರು ಉಪ-ಖಂಡಗಳ ಮೇರೆಗೆ ಅಪರಾಧಿಕಾ ನಿಂದನೆಯಾಗುತ್ತವೆ. ಅರ್ಜಿದಾರನ ವಿರುದ್ಧ ಅಪರಾಧಿಕಾ ನಿಂದನೆ ಎಸಗಿದ್ದಕ್ಕಾಗಿ ಸ್ವಯಂಪ್ರೇರಿತವಾಗಿ ನಿಂದನಾ ವ್ಯವಹರಣೆಗಳನ್ನು ನಾವು ಪ್ರಾರಂಭಿಸಬೇಕೇ ಎಂಬುದು ಪ್ರಶ್ನೆಯಾಗಿದೆ. ನಾವು, ಸ್ವಯಂಪ್ರೇರಿತ ನಿಂದನಾ ವ್ಯವಹರಣೆಗಳನ್ನು ಪ್ರಾರಂಭಿಸುವ ಪ್ರಶ್ನೆಯನ್ನು ನಮ್ಮ ಮನಸ್ಸಿನಲ್ಲಿ ತಂದುಕೊಂಡಾಗ, ಇದನ್ನು ಪ್ರಾರಂಭಿಸದೆ ಇರುವುದಕ್ಕೆ ಒಂದಕ್ಕಿಂತ ಹೆಚ್ಚು ಅಂಶಗಳು ನಮ್ಮನ್ನು ಕಾಡಿದವು. ಮೊದಲನೆಯ ಮತ್ತು ಅತ್ಯಂತ ಮುಖ್ಯವಾದ ಕಾರಣವೆಂದರೆ, ***ಇನ್ ರೆ ಎಸ್. ಮುಲಗಾಂವ್‌ಕರ್***[1] ಮೊಕದ್ದಮೆಯಲ್ಲಿನ ಪ್ರಮುಖ ನಿರ್ಣಯದಲ್ಲಿ ಸರ್ವೋಚ್ಚ ನ್ಯಾಯಾಲಯವು ಏನು ಅಭಿಪ್ರಾಯಪಟ್ಟಿದೆಯೋ ಅದರಿಂದ ನಾವು ಮಾರ್ಗದರ್ಶನ ಪಡೆದಿದ್ದು, ಸದರಿ ನಿರ್ಣಯದಲ್ಲಿ, ***ರೆಜಿನಾ -ವಿರುದ್ಧ- ಮೆಟ್ರೊಪಾಲಿಟನ್ ಪೋಲೀಸ್ ಕಮಿಷನರ್ ಎಕ್ಸ್.ಪಿ. ಬ್ಲಾಕ್‌ಬರ್ನ್***[2] ಮೊಕದ್ದಮೆಯಲ್ಲಿನ ವಿದೇಶಿ ನಿರ್ಣಯವನ್ನು ಅವಲಂಬಿಸಲಾಗಿದೆ. ದಿನಾಂಕ: 28ನೇ ಜನವರಿ, 2020ರ ತೀರ್ಪು ಮತ್ತು ಆದೇಶದ ಮೂಲಕ ವ್ಯವಹರಣೆಗಳನ್ನು ಕೈಬಿಡುವಾಗ, ಕ್ರಿಮಿನಲ್ ಸಿಸಿಸಿ ಸಂಖ್ಯೆ: 1/2020 ಮತ್ತು

1. (1978) 3 ಎಸ್‌ಸಿಸಿ 339

2. (1968) 2 ಡಬ್ಲ್ಯುಎಲ್‌ಆರ್ 1204

15/2019ರ ರೂಪದಲ್ಲಿ ರಾಜ್ಯದಲ್ಲಿ ಪ್ರಮುಖ ಮಾಧ್ಯಮ ಕೂಟಗಳ ವಿರುದ್ಧ ಸ್ವಯಂಪ್ರೇರಿತ ಕ್ರಿಮಿನಲ್ ನಿಂದನಾ ವ್ಯವಹರಣೆಗಳನ್ನು ಈ ನ್ಯಾಯಾಲಯವು ಪ್ರಾರಂಭಿಸಿದಾಗ, ನಮ್ಮಲ್ಲಿ ಒಬ್ಬರು (ಮುಖ್ಯ ನ್ಯಾಯಮೂರ್ತಿಗಳು) ಪಕ್ಷಕಾರರಾಗಿದ್ದ ಈ ನ್ಯಾಯಾಲಯದ ವಿಭಾಗೀಯ ಪೀಠವು, ಮೇಲೆ ಹೇಳಿದ ನಿರ್ಣಯಗಳನ್ನು ಅವಲಂಬಿಸಿತ್ತು. ಕ್ರಿಮಿನಲ್ ಸಿಸಿಸಿ ಸಂಖ್ಯೆ: 1/2020ರಲ್ಲಿನ ನಿರ್ಣಯದ 34ನೇ ಮತ್ತು 35ನೇ ಕಂಡಿಕೆಗಳನ್ನು ಈ ಮುಂದಿನಂತೆ ಓದಲಾಗಿದೆ:

> *"34. ನಿಂದನೆಯಿಂದ ಮುಕ್ತಗೊಳಿಸಲಾಗಿದೆ ಎಂದು ನಿಖರವಾಗಿ ಹೇಳಲಾಗದಿದ್ದರೂ,* ***ಇನ್ ರೆ ಎಸ್. ಮುಲಗಾಂವ್‌ಕರ್*** *ಮೊಕದ್ದಮೆಯಲ್ಲಿನ ಸರ್ವೋಚ್ಚ ನ್ಯಾಯಾಲಯದ ಪ್ರಮುಖ ನಿರ್ಣಯದಲ್ಲಿ, ಅದು ವಿಧಿಸಿದ ತತ್ತ್ವಗಳಿಂದ ನಾವು ಮಾರ್ಗದರ್ಶನ ಪಡೆದಿದ್ದೇವೆ. ನ್ಯಾಯಮೂರ್ತಿ ಕೃಷ್ಣ ಅಯ್ಯರ್ ಅವರ ವಿದ್ವತ್ಪೂರ್ಣ ಅಭಿಪ್ರಾಯದಿಂದ ನಾವು ಮಾರ್ಗದರ್ಶನ ಪಡೆದಿದ್ದು, ಅದು ಇಡೀ ನಿಂದನಾ ನಿಯಮವನ್ನು ಸಂಕ್ಷಿಪ್ತಗೊಳಿಸಿ, ಸಮಗ್ರ ತತ್ತ್ವಗಳನ್ನು ವಿಧಿಸುವ ಪ್ರಯತ್ನಗಳನ್ನು ಮಾಡಿದೆ. ನ್ಯಾಯಮೂರ್ತಿ ಕೃಷ್ಣ ಅಯ್ಯರ್ ಅವರು 27ನೇ ಕಂಡಿಕೆಯಲ್ಲಿ ಹೇಳಿರುವುದನ್ನು ಉಲ್ಲೇಖಿಸಬೇಕೆನಿಸುತ್ತಿದೆ. ಸದರಿ ಕಂಡಿಕೆಯನ್ನು ಈ ಕೆಳಗಿನಂತೆ ಓದಲಾಗಿದೆ:*
>
> *"ನಿಂದನಾ ಅಧಿಕಾರದ ಈ ವಿಷಯದ ಮೊದಲ ನಿಯಮ, ನ್ಯಾಯಾಲಯವು ತನ್ನ ಅಧಿಕಾರವ್ಯಾಪ್ತಿಯ ಈ ವಿಷಯವನ್ನು ಜಾಣತನದಿಂದ ಹಿತಮಿತವಾಗಿ ಬಳಸಬೇಕೆಂಬುದಾಗಿದೆ. ನ್ಯಾಯಾಧೀಶರ ಮೇಲೆ ಸಂಪೂರ್ಣವಾಗಿ ಮತ್ತು/ಅಥವಾ ನಿರಾಧಾರವಾಗಿ ದೂಷಣೆ ಹೊರಿಸಿ, ನ್ಯಾಯ ವ್ಯವಸ್ಥೆಯನ್ನು ಗಂಡಾಂತರಕ್ಕೀಡು ಮಾಡಿದಲ್ಲಿ, ನ್ಯಾಯಿಕ ಪ್ರಕ್ರಿಯೆಗೆ ಅಡಚಣೆ ಒಡ್ಡಲು ಅಥವಾ ಅದನ್ನು ನಾಶಪಡಿಸುವ ಲೆಕ್ಕಾಚಾರದಿಂದ*

*ಯೋಜಿಸಿದಲ್ಲಿ, ನ್ಯಾಯಾಲಯವು, ಗಂಭೀರವಾಗಿ ಮತ್ತು ನಿರ್ದಾಕ್ಷಿಣ್ಯದಿಂದ ಕಾರ್ಯನಿರ್ವಹಿಸುವುದು. ಕ್ಷುಲ್ಲಕ ಮತ್ತು ಲಘು ಅಪರಾಧಗಳನ್ನು, ‘ನಾಯಿ ಬೊಗಳಿದರೆ ದೇವಲೋಕ ಹಾಳಾಗುವುದಿಲ್ಲ’ ಎಂಬಂತೆ ನ್ಯಾಯಾಲಯವು ಘನತೆಯುಕ್ತ ಉದಾರ ಮನೋಭಾವದಿಂದ ಉಪೇಕ್ಷಿಸಲು ಇಚ್ಛಿಸುತ್ತದೆ. ಸುಲಭವಾಗಿ ಕಿರಿಕಿರಿಯುಂಟು ಮಾಡಿಕೊಳ್ಳುವುದರಿಂದಾಗಿ, ನ್ಯಾಯಾಲಯಕ್ಕೆ ತ್ವರಿತವಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುವುದಿಲ್ಲ. ಅದಕ್ಕಿಂತ ಹೆಚ್ಚಾಗಿ, ಇದು ವೈಶಿಷ್ಟ್ಯಗಳ ಸಮಗ್ರ ದೃಷ್ಟಿಕೋನವನ್ನು ಗಮನಿಸುತ್ತದೆ ಹಾಗೂ ತನ್ನ ನಿಂದನಾ ಅಧಿಕಾರವನ್ನು ಬಳಸುವುದನ್ನು ಅಥವಾ ಬಳಸದೆ ಬಿಡುವುದನ್ನು ಅದು ಆಯ್ಕೆ ಮಾಡಿಕೊಂಡಾಗ, ಒಟ್ಟಾರೆಯಾಗಿ ಸಾಂವಿಧಾನಿಕ ಮತ್ತು ಇತರ ಪರಿಗಣನಾಂಶಗಳಿಂದ ಮಾರ್ಗದರ್ಶನ ಪಡೆಯುತ್ತದೆ."*

*35. ಮೊದಲ ನಿಯಮದ ಭಾಗವಾಗಿ ರೂಪುಗೊಂಡಿರುವ 27ನೇ ಕಂಡಿಕೆಯಲ್ಲಿ ಹೇಳಲಾಗಿರುವ ಮೊದಲ ಭಾಗವು ಅನ್ವಯವಾಗದೆ ಇರಬಹುದಾದರೂ, ಇದು, ನ್ಯಾಯವನ್ನು ಸಂಪೂರ್ಣವಾಗಿ ಅಪಾಯಕ್ಕೀಡು ಮಾಡಿರುವುದರಿಂದ ಮತ್ತು/ ಅಥವಾ ನ್ಯಾಯಿಕ ವ್ಯವಸ್ಥೆಯ ಮೇಲೆ ನಿರಾಧಾರವಾದ ದಾಳಿ ನಡೆಸಲಾಗಿದೆಯಾದ್ದರಿಂದ, ಈ ನ್ಯಾಯಾಲಯವು ಗಂಭೀರತೆಯಿಂದ ಕಾರ್ಯನಿರ್ವಹಿಸಿದೆ. ಆದಾಗ್ಯೂ, ನ್ಯಾಯಮೂರ್ತಿ ಕೃಷ್ಣ ಅಯ್ಯರ್ ಅವರು ಅಭಿಪ್ರಾಯಪಟ್ಟಿರುವಂತೆ, ಆರೋಪಿಯು ತೋರಿದ ಪರಿಮಿತ ಪಶ್ಚಾತ್ತಾಪವನ್ನು ಮತ್ತು ಆತನು ನೀಡಿದ ಇತರ ಭರವಸೆಗಳನ್ನು ಪರಿಗಣಿಸಿ, "ಉದಾರಶೀಲ ತತ್ತ್ವ"ವೆಂದು ಮಾನ್ಯ ನ್ಯಾಯಮೂರ್ತಿಗಳು ಏನನ್ನು ವಿವರಿಸಿರುವರೋ ಅದನ್ನು ಮನವರಿಕೆ ಮಾಡಿಕೊಡಲು ನಾವು ಉತ್ಸುಕರಾಗಿದ್ದೇವೆ. ಇದೇ ವಿದ್ವತ್ಪೂರ್ಣ ಪ್ರತಿಪಾದನೆಯಲ್ಲಿನ 40ನೇ ಕಂಡಿಕೆಯಲ್ಲಿ, ಸರ್ವೋಚ್ಚ*

ನ್ಯಾಯಾಲಯವು, ***ರೆಜಿನಾ –ವಿರುದ್ಧ– ಮೆಟ್ರೋಪಾಲಿಟನ್ ಪೋಲೀಸ್ ಕಮಿಷನರ್ ಎಕ್ಸ್.ಪಿ. ಬ್ಲಾಕ್‌ಬರ್ನ್*** *(ಮೇಲೆ ಹೇಳಿದ)* ಮೊಕದ್ದಮೆಯಲ್ಲಿನ ಸುಪ್ರಸಿದ್ಧ ನಿರ್ಣಯವನ್ನು ಉಲ್ಲೇಖಿಸಿ, ಈ ತೀರ್ಪು ಸಂಯಮ ಮೀರಿದ ಭಾಷೆಯಲ್ಲಿ ನ್ಯಾಯಾಲಯಗಳ ವಿಮರ್ಶೆಯ ಪ್ರಶ್ನೆಗೆ ಅತ್ಯಂತ ಮೌಲ್ಯಯುತ ಮತ್ತು ಗಮನಾರ್ಹ ಹೊಸ ದೃಷ್ಟಿಕೋನವನ್ನಾಧರಿಸಿದೆ ಎಂದು ಹೇಳಿರುವುದನ್ನು ಉಲ್ಲೇಖಿಸಿದೆ. ನ್ಯಾಯಮೂರ್ತಿ ಕೃಷ್ಣ ಅಯ್ಯರ್ ಅವರು, ನ್ಯಾಯಮೂರ್ತಿ ಡೆನಿಂಗ್ ಅವರ ಅಭಿಪ್ರಾಯವನ್ನು ಉಲ್ಲೇಖಿಸಿದ್ದು, ಅದನ್ನು ಈ ಕೆಳಗಿನಂತೆ ಓದಲಾಗಿದೆ;

"ನನಗೆ ಗೊತ್ತಿರುವಷ್ಟರಮಟ್ಟಿಗೆ, ನ್ಯಾಯಾಲಯವು ತನ್ನ ವಿರುದ್ಧದ ನಿಂದನಾ ಆಪಾದನೆಯನ್ನು ಪರಿಗಣಿಸಲು ತಾನೇ ಕರೆದಿರುವ ಮೊದಲ ಮೊಕದ್ದಮೆಯಾಗಿದೆ. ಸಂಶಯಾತೀತವಾಗಿ ನಮಗೆ ಸೇರಿರುವ ಅಧಿಕಾರವ್ಯಾಪ್ತಿಯನ್ನು ಅದು ಹೊಂದಿದ್ದರೂ, ನಾವು ಅತ್ಯಂತ ವಿರಳವಾಗಿ ಅದನ್ನು ಚಲಾಯಿಸುತ್ತೇವೆ : ಇನ್ನೂ ನಿರ್ದಿಷ್ಟವಾಗಿ, ಈ ವಿಷಯದಲ್ಲಿ ನಾವು ನಮ್ಮ ಬಗ್ಗೆಯೇ ಹಿತಾಸಕ್ತಿ ಹೊಂದಿದ್ದೇವೆ.

ನಮ್ಮದೇ ಘನತೆಯನ್ನು ಎತ್ತಿಹಿಡಿಯುವ ಸಾಧನವಾಗಿ ನಾವು ಈ ಅಧಿಕಾರವ್ಯಾಪ್ತಿಯನ್ನು ಎಂದಿಗೂ ಬಳಸುವುದಿಲ್ಲವೆಂಬುದನ್ನು ಈ ಕ್ಷಣವೇ ನಾನು ಹೇಳಿಬಿಡುತ್ತೇನೆ. ಅದು ನಿಶ್ಚಿತ ಆಧಾರಗಳನ್ನವಲಂಬಿಸಿರಬೇಕು ಅಥವಾ ನಮ್ಮ ವಿರುದ್ಧ ಮಾತನಾಡುವವರನ್ನು ದಮನ ಮಾಡಲು ನಾವು ಅದನ್ನು ಬಳಸುವುದಿಲ್ಲ. ನಾವು ಟೀಕೆಗಳಿಗೆ ಹೆದರುವುದಿಲ್ಲ ಅಥವಾ ನಾವು ಅದರಿಂದ ಅಸಮಾಧಾನಗೊಳ್ಳುವುದಿಲ್ಲ. ಇವುಗಳಿಗಿಂತ ಮತ್ತೇನೋ ಹೆಚ್ಚು ಮುಖ್ಯವಾದುದಾಗಿದೆ. ಇದು ವಾಕ್ ಸ್ವಾತಂತ್ರ್ಯಕ್ಕಿಂತ ಕಡಿಮೆಯೇನಲ್ಲ.

*ಸಂಸತ್ತಿನಲ್ಲಿ ಅಥವಾ ಅದರಿಂದ ಹೊರಗೆ, ಮಾಧ್ಯಮದಲ್ಲಿ ಅಥವಾ ಬಾನುಲಿಯಲ್ಲಿ, ಸಾರ್ವಜನಿಕ ಹಿತಾಸಕ್ತಿಯ ವಿಷಯಗಳನ್ನು ಕುರಿತು ನ್ಯಾಯಯುತ ಟೀಕೆ ಮಾಡುವುದು, ನಿರ್ದಾಕ್ಷಿಣ್ಯವಾಗಿ ಮಾತನಾಡುವುದು ಪ್ರತಿಯೊಬ್ಬ ವ್ಯಕ್ತಿಯ ಹಕ್ಕಾಗಿದೆ. ಹಾಗೆ ಟೀಕೆ ಮಾಡುವವರು, ನ್ಯಾಯಾಲಯದಲ್ಲಿ ಮಾಡುವಂಥ ಎಲ್ಲ ವಿಷಯಗಳ ಬಗ್ಗೆಯೂ ಅಪನಂಬಿಕೆಯಿಂದಲೇ ವ್ಯವಹರಿಸಬಹುದಾಗಿದೆ. ಅವರು ಅಪೀಲಿಗೆ ಒಳಪಟ್ಟಿರಲಿ ಅಥವಾ ಇಲ್ಲದಿರಲಿ, ನಾವು ತಪ್ಪು ಮಾಡಿದ್ದೇವೆ ಮತ್ತು ನಮ್ಮ ನಿರ್ಣಯಗಳು ತಪ್ಪಾಗಿವೆ ಎಂದು ಅವರು ಹೇಳಬಹುದಾಗಿದೆ. <u>ಒಟ್ಟಿನಲ್ಲಿ ನಾವು ಕೇಳುವುದೇನೆಂದರೆ, ನಮ್ಮನ್ನು ವಿಮರ್ಶಿಸುವವರು, ನಮ್ಮ ಹುದ್ದೆಯ ಸ್ವರೂಪದಿಂದಾಗಿ ಅವರ ಟೀಕೆಗಳಿಗೆ ನಾವು ಉತ್ತರಿಸಲಾಗುವುದಿಲ್ಲ ಎಂಬುದನ್ನು ನೆನಪಿಸಿಕೊಳ್ಳುತ್ತಾರೆಯೇ. ನಾವು ಸಾರ್ವಜನಿಕ ವಾಗ್ವಾದದಲ್ಲಿ ಮಧ್ಯಪ್ರವೇಶಿಸಲಾಗುವುದಿಲ್ಲ.</u> ರಾಜಕೀಯ ವಿಷಯಗಳಲ್ಲಂತೂ ಕಡಿಮೆಯೇ ಎಂದು ಹೇಳಬಹುದು. ಅದನ್ನು ಸಮರ್ಥನೆ ಮಾಡಿಕೊಳ್ಳಲು ನಾವು ಸ್ವತಃ ನಮ್ಮ ನಡತೆಯನ್ನೇ ಅವಲಂಬಿಸಬೇಕಾಗುತ್ತದೆ.*

*<u>ಟೀಕೆಗಳಿಗೆ ನಮ್ಮನ್ನು ನಾವು ಒಡ್ಡಿಕೊಂಡಾಗ, ಯಾರು ಏನು ಟೀಕಿಸಿದರೂ, ನಾವು ಸರಿಯೆಂದು ನಂಬಿರುವುದನ್ನು ಮಾಡುವುದರಿಂದ ಅಥವಾ ಪ್ರಸ್ತುತ ವಿಷಯಕ್ಕೆ ಸಂಬಂಧಪಟ್ಟ ಪಕ್ಷದಲ್ಲಿ, ಸಂದರ್ಭವು ಅಗತ್ಯಪಡಿಸಿರುವುದನ್ನು ಹೇಳುವುದರಿಂದ ನಮ್ಮನ್ನು ಯಾವುದೂ ತಡೆಯುವುದಿಲ್ಲ, ತಪ್ಪು ಕೆಲಸಗಳನ್ನು ಮಾಡಿದಾಗ, ಮೌನವು ಆಯ್ಕೆಯಾಗುವುದಿಲ್ಲ."</u>*

11. ಕರ್ನಾಟಕ ರಾಜ್ಯದಲ್ಲಿ ವಕೀಲ ವೃತ್ತಿ ನಡೆಸುತ್ತಿರುವ ಈ ನ್ಯಾಯಾಲಯದ ಮಾನ್ಯ ನ್ಯಾಯಾಧೀಶರೆಲ್ಲರೂ, ಈ ನ್ಯಾಯಾಲಯದ ನ್ಯಾಯಾಧೀಶರಾಗಿದ್ದ ಭಾರತದ ಹಿಂದಿನ ಮುಖ್ಯ ನ್ಯಾಯಾಧೀಶರಿಂದ ಪ್ರಭಾವಿತರಾಗಿದ್ದಾರೆ ಎಂದು ಆರೋಪಿಸುವ

ಮಟ್ಟಕ್ಕೆ ಅರ್ಜಿದಾರನು ಹೋಗಿರುವುದು ದುರಾದೃಷ್ಟಕರ ಸಂಗತಿಯಾಗಿದೆ. ಭಾರತದ ಹಿಂದಿನ ಮುಖ್ಯ ನ್ಯಾಯಾಧೀಶರ ಅವಿವಾದಿತ ಬುದ್ಧಿಶಕ್ತಿಗೆ ಬಹುತೇಕ ನ್ಯಾಯಾಧೀಶರು ಗೌರವಾದರ ತೋರಿಸುತ್ತಾರೆ ಎಂಬುದು ಆಪಾದನೆಯಾಗಿದೆ. ಸಾಂವಿಧಾನಿಕ ಹುದ್ದೆಗಳನ್ನು ಧಾರಣ ಮಾಡಿರುವ ಮಾನ್ಯ ನ್ಯಾಯಾಧೀಶರುಗಳು ಸಹ ಮನುಷ್ಯರೇ ಆಗಿದ್ದು, ಅವರು ಅತ್ಯಂತ ಬುದ್ಧಿಶಕ್ತಿ ಮತ್ತು ಜ್ಞಾನವನ್ನು ಹೊಂದಿರುವಂಥವರನ್ನು ಗೌರವಿಸಲು ಬದ್ಧರಾಗಿರುತ್ತಾರೆ. ಆದರೂ, ಈ ನ್ಯಾಯಾಧೀಶರುಗಳು ಸಂವಿಧಾನದ ಮೇರೆಗೆ ಪ್ರಮಾಣವಚನ ತೆಗೆದುಕೊಂಡವರಾಗಿದ್ದಾರೆ. ಯಾರನ್ನೋ ಅವರು ಗೌರವಿಸುತ್ತಾರೆ ಎಂಬ ಕಾರಣ ಮಾತ್ರವೇ, ತಮ್ಮ ನ್ಯಾಯಿಕ ಕರ್ತವ್ಯಗಳನ್ನು ನಿರ್ವಹಿಸುವಾಗ, ಸದರಿ ವ್ಯಕ್ತಿಯಿಂದ ಅವರು ಪ್ರಭಾವಿತರಾಗುತ್ತಾರೆ ಎಂಬುದರಲ್ಲಿ ಯಾವುದೇ ಅರ್ಥವಿಲ್ಲ. ಇಂಥ ಆಪಾದನೆಗಳನ್ನು ಮಾಡುವಾಗ, ಅರ್ಜಿದಾರನು ಭಾರತದ ನಿವೃತ್ತ ಮುಖ್ಯ ನ್ಯಾಯಾಧೀಶರ ಮೇಲೆ ದೋಷಾರೋಪಣೆ ಮಾಡಲು ಪ್ರಯತ್ನಿಸಿದ್ದಾರೆ. ಈ ಅರ್ಜಿಯಲ್ಲಿ ಒಂದು ಕಡೆ, ಅರ್ಜಿದಾರನು ಭಾರತದ ಸದರಿ ನಿವೃತ್ತ ಮುಖ್ಯ ನ್ಯಾಯಾಧೀಶರ ಅವಿವಾದಿತ ಬುದ್ಧಿಶಕ್ತಿಯ ಬಗ್ಗೆ ಸ್ವತಃ ಮಾತನಾಡಿದ್ದಾನೆ. ಈ ನ್ಯಾಯಾಲಯದ ನ್ಯಾಯಾಧೀಶರು ತಮ್ಮ ಕರ್ತವ್ಯಗಳನ್ನು ನಿರ್ವಹಿಸುವಾಗ ಸದರಿ ನಿವೃತ್ತ ಮುಖ್ಯ ನ್ಯಾಯಾಧೀಶರು ಅವರ ಮೇಲೆ ಪ್ರಭಾವ ಬೀರುವರು ಎಂಬ ಆಪಾದನೆಗೆ ನಿರುಪಾಧಿಕವಾಗಿ ಯಾವುದೇ ಆಧಾರವಿಲ್ಲ. ಸದರಿ ಆಪಾದನೆಗಳು ನಂಬಲಸಾಧ್ಯವಾಗಿವೆ.

12. ಈ ನ್ಯಾಯಾಲಯವನ್ನು ಕಳಂಕಿತವನ್ನಾಗಿಸುವ ಗಂಭೀರ ಪ್ರಯತ್ನವಲ್ಲದೆ ಮತ್ತೇನೂ ಅಲ್ಲದ ಅರ್ಜಿದಾರನ ಈ ಕ್ರಮವನ್ನು ಸಾಧ್ಯವಿರುವ ಕಠಿಣವಾದ ಪದಗಳಲ್ಲಿ ಖಂಡಿಸಬೇಕಾಗುತ್ತದೆ. ಈ ಮೊದಲೇ ಹೇಳಿದಂತೆ, ಸ್ವಯಂಪ್ರೇರಿತ ನಿಂದನಾ ಕ್ರಮವನ್ನು ನಾವು ಏಕೆ ಪ್ರಾರಂಭಿಸಲಿಲ್ಲ ಎಂಬುದಕ್ಕೆ, ಸರ್ವೋಚ್ಚ ನ್ಯಾಯಾಲಯವು ವಿಧಿಸಿದ ತತ್ತ್ವಗಳಿಂದ ನಾವು ಮಾಗದರ್ಶನ ಪಡೆದಿರುತ್ತೇವೆ ಎಂಬುದು ಒಂದು ಕಾರಣವಾಗಿದೆ. ಸಂವಿಧಾನಬದ್ಧ ನ್ಯಾಯಾಲಯದ ನ್ಯಾಯಾಧೀಶರಾಗಿ

ನಾವು ಉದಾತ್ತ ಮನೋಭಾವ ತೋರಿಸಬೇಕೆಂದು ಸರ್ವೋಚ್ಚ ನ್ಯಾಯಾಲಯವು ಅಭಿಪ್ರಾಯಪಟ್ಟಿದೆ. ಸರ್ವೋಚ್ಚ ನ್ಯಾಯಾಲಯವು ***ರೆಜಿನಾ*** (ಮೇಲೆ ಹೇಳಿದ) ಮೊಕದ್ದಮೆಯಲ್ಲಿ ವಿಧಿಸಿದ ನಿಯಮವನ್ನು ಉಲ್ಲೇಖಿಸಿದ್ದು, ಅದರಲ್ಲಿ ಲಾರ್ಡ್ ಡೆನಿಂಗ್ ಅವರು, ನ್ಯಾಯಾಧೀಶರಾಗಿ ನಾವು, ನಮ್ಮ ಘನತೆಯನ್ನು ಎತ್ತಿಹಿಡಿಯುವ ಸಾಧನವಾಗಿ ನಿಂದನಾ ಅಧಿಕಾರವ್ಯಾಪ್ತಿಯನ್ನು ಎಂದಿಗೂ ಬಳಸುವುದಿಲ್ಲ. ಅದು ನಿಶ್ಚಿತ ಆಧಾರಗಳನ್ನವಲಂಬಿಸಿರಬೇಕು. ಆದರೂ ನಾವು, ಇದೇ ತೀರ್ಪಿನಲ್ಲಿ ಲಾರ್ಡ್ ಡೆನಿಂಗ್ ಅವರು, 'ಕೆಟ್ಟ ಕೆಲಸ ಮಾಡಿದಾಗ ಮೌನವು ಆಯ್ಕೆಯಾಗುವುದಿಲ್ಲ' ಎಂದು ಅಭಿಪ್ರಾಯಪಟ್ಟಿರುವರೆಂಬುದನ್ನು ಸಂಬಂಧಪಟ್ಟವರೆಲ್ಲರಿಗೂ ನೆನಪಿಸುತ್ತೇವೆ. ಆದುದರಿಂದ, ಸ್ವಯಂಪ್ರೇರಿತ ಅಪರಾಧಿಕಾ ನಿಂದನೆಗೆ ಕ್ರಮವನ್ನು ಪ್ರಾರಂಭಿಸಲು ನಾವು ಪ್ರವೃತ್ತರಾದಾಗ, ನಮ್ಮ ಮೌನವನ್ನು ನಮ್ಮ ದೌರ್ಬಲ್ಯವೆಂದು ಅರ್ಥೈಸಬಾರದು. ಹೃದಯವೈಶಾಲ್ಯವನ್ನು ತೋರಲೇಬೇಕಾದರೆ, ಅದು ಸಾಂವಿಧಾನಿಕ ಹುದ್ದೆಗಳನ್ನು ಹೊಂದಿರುವ ವ್ಯಕ್ತಿಗಳಿಂದಾಗಿರಬೇಕೆಂದು ನಾವು ನಂಬುತ್ತೇವೆ.

13. ಅರ್ಜಿದಾರನು ಅಂತಿಮವಾಗಿ ಅರ್ಜಿಯನ್ನು ಹಿಂತೆಗೆದುಕೊಳ್ಳಲು ಜ್ಞಾಪನಪತ್ರವನ್ನು ಸಲ್ಲಿಸಿರುವನೆಂಬ ಸಂಗತಿಯ ಹೊರತಾಗಿ, ಕ್ರಿಮಿನಲ್ ಸಿ.ಸಿ.ಸಿ. ಸಂಖ್ಯೆ: 1/2020ರಲ್ಲಿ ಈ ನ್ಯಾಯಾಲಯವು ಅನುಸರಿಸಿದ ಸರ್ವೋಚ್ಚ ನ್ಯಾಯಾಲಯವು ವಿಧಿಸಿದ ನಿಯಮವೇ ಕ್ರಮ ತೆಗೆದುಕೊಳ್ಳದಿರುವಂತೆ ನಮ್ಮನ್ನು ಪ್ರೇರೇಪಿಸಿದ ಮುಖ್ಯ ಕಾರಣವಾಗಿದೆ. ನಾವು ಹಾಗೆ ಹೇಳುವಾಗ, ಇಡೀ ಕರ್ನಾಟಕ ಉಚ್ಚ ನ್ಯಾಯಾಲಯವನ್ನು ದೂಷಿಸುವಂತಹ ಒಂದು ಆಘಾತಕಾರಿ ಪ್ರಯತ್ನವನ್ನು ನಮ್ಮ ಗಮನಕ್ಕೆ ತಂದಿರುವಾಗ, ಮೌನದ ಆಯ್ಕೆಯನ್ನು ನಾವು ಅಳವಡಿಸಿ ಕೊಳ್ಳುವುದಿಲ್ಲವೆಂಬುದನ್ನು ನಾವು ಪುನರುಚ್ಚರಿಸುತ್ತೇವೆ.

14. ಈ ಆದೇಶವನ್ನು ಬಿಟ್ಟುಬಿಡುವ ಮೊದಲು, ನ್ಯಾಯಾಲಯ ಸದಸ್ಯರ ಕಾರ್ಯಪಾತ್ರದ ಬಗ್ಗೆ ನಾವು ಹೇಳಬಯಸುವುದೇನೆಂದರೆ, ನ್ಯಾಯಾಲಯದ ಸದಸ್ಯನು, ಮೊದಲು ನ್ಯಾಯಾಲಯದ ಅಧಿಕಾರಿಯಾಗಿ, ಆ ತರುವಾಯ, ತನ್ನ ಕಕ್ಷಿದಾರನ ಮುಖವಾಣಿಯಾಗಿ ಕಾರ್ಯನಿರ್ವಹಿಸುವನೆಂದು ನಿರೀಕ್ಷಿಸಲಾಗುತ್ತದೆ ಎಂಬುದು

ಇತ್ಯರ್ಥಗೊಂಡ ವಿಷಯವಾಗಿದೆ. ಈ ನಿಟ್ಟಿನಲ್ಲಿ, ***ಟಿ. ಅರಿವಂದಂದಮ್ –ವಿರುದ್ಧ– ಟಿ.ವಿ. ಸತ್ಯಪಾಲ್ ಮತ್ತು ಇನ್ನೊಬ್ಬರು***[3] ಮೊಕದ್ದಮೆಯಲ್ಲಿನ ಸರ್ವೋಚ್ಚ ನ್ಯಾಯಾಲಯದ ನಿರ್ಣಯದ 7ನೇ ಕಂಡಿಕೆಯಲ್ಲಿ ಏನನ್ನು ಅಭಿಪ್ರಾಯಪಡಲಾಗಿದೆಯೋ ಅಂಥ ದುಷ್ಪ್ರೇರಣೆಯನ್ನು ತಪ್ಪಿಸಲಾಗುವುದಿಲ್ಲ. ಸದರಿ ಮೊಕದ್ದಮೆಯ 7ನೇ ಕಂಡಿಕೆಯನ್ನು ಈ ಕೆಳಗಿನಂತೆ ಓದಲಾಗಿದೆ:

> *"7. ಸಂವೇದನಾಶೂನ್ಯ ಪಕ್ಷಕಾರನು ಉಚ್ಚ ನ್ಯಾಯಾಲಯದ ಮಾನ್ಯ ನ್ಯಾಯಾಧೀಶರ ಮೇಲೆ ಅಗ್ನಿಪರೀಕ್ಷೆ ಒಡ್ಡಿರುವುದಕ್ಕೆ ನಾವು ವಿಷಾದಿಸುತ್ತೇವೆ. ಸಂಬಂಧಪಟ್ಟ ಪಕ್ಷಕಾರನು ಕುಟಿಲ ಅಥವಾ ದುರದೃಷ್ಟಕರವಾಗಿದ್ದ ಮೊಕದ್ದಮೆಯನ್ನು ನ್ಯಾಯಾಲಯದ ಮುಂದಿಡಲು ಒಬ್ಬರಲ್ಲ ಇನ್ನೊಬ್ಬರು ವಕೀಲರನ್ನು ಮನವೊಲಿಸಲು ಶಕ್ತನಾಗಿದ್ದಾನೆಂಬ ಸಂದರ್ಭದ ಬಗ್ಗೆ ನಾವು ಇನ್ನೂ ಹೆಚ್ಚು ವಿಷಾದಿಸುತ್ತೇವೆ. ಅವಿಶ್ವಸನೀಯ ಕಕ್ಷಿದಾರರಿಂದ ಆಕರ್ಷಿತರಾಗುವುದನ್ನು ನಿರಾಕರಿಸಿ, ನ್ಯಾಯವಾದಿಯು ಸಂಪೂರ್ಣವಾಗಿ ಮೋಸದಿಂದ ಕೂಡಿದ ಮತ್ತು ಕ್ಷುಲ್ಲಕ ವ್ಯಾಜ್ಯವನ್ನು ಪರಿಶೀಲಿಸಿದರೆ, ಅದು ನ್ಯಾಯೋದ್ದೇಶ ಈಡೇರಿಕೆಗೆ ಮೌಲ್ಯಯುತ ಕೊಡುಗೆಯಾಗಬಹುದು. ಮತ್ತು ನ್ಯಾಯವಾದಿಯು ನ್ಯಾಯಿಕ ಅಧಿಕಾರಿಯಾಗಿದ್ದು, ಆತನು ಸಮಾಜಕ್ಕೆ ಋಣಿಯಾಗಿರುತ್ತಾನೆಯೇ ಹೊರತು, ಸಂಶಯಾಸ್ಪದ ಕ್ರಮಗಳಲ್ಲಿ ಸಹಕರಿಸಬಾರದು ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಭಾರತದ ವಕೀಲರ ಪರಿಷತ್ತು, ಈ ಬಾಧ್ಯತೆಯನ್ನು ಕಾರ್ಯಪ್ರವೃತ್ತಗೊಳಿಸುತ್ತದೆಂದು ನಾವು ಆಶಿಸುತ್ತೇವೆ. ಈ ಅಭಿಪ್ರಾಯಗಳನ್ನು ಹೇಳಲು ನಾವು ನಿರ್ಬಂಧಿತರಾಗಿದ್ದು, ಈಗ ನಾವು ವಿಲೆ ಮಾಡುತ್ತಿರುವಂಥ ಕೃತ್ರಿಮ ವ್ಯಾಜ್ಯಗಳು ಕಾರ್ಯಭಂಗ ಮಾಡುವುದನ್ನು ತಪ್ಪಿಸಿ, ಯೋಗ್ಯ*

3. (1977) 4 ಎಸ್‌ಸಿಸಿ 467

*ವಿವಾದಗಳಿಗೆ ನ್ಯಾಯಿಕ ಸಮಯವನ್ನು ಬಳಸಲು ಪರಿಷತ್ತಿನ ಸಹಕಾರವು ನ್ಯಾಯಾಲಯಕ್ಕೆ ಸಿದ್ಧವಾಗಿ ಒದಗಿಬರುತ್ತದೆಂದು ನಾವು ಆಶಿಸುತ್ತೇವೆ. ಈ ಋಜುವಲ್ಲದ ಸರಣಿ ವ್ಯಾಜ್ಯಗಳ ಮತ್ತೊಂದು ನೈತಿಕ ಅಂಶವೆಂದರೆ, ಸುಲಭವಾಗಿ ವಂಚಿಸಬಹುದಾದ ಏಕಪಕ್ಷೀಯ ಆದೇಶಗಳನ್ನು ನೀಡುವುದು, ನಿಸ್ಸಂಕೋಚವಾಗಿ ನ್ಯಾಯಾಲಯಗಳಲ್ಲಿ ವ್ಯಾಜ್ಯ ಹೂಡಲು ಜೂಜುಕೋರರನ್ನು ಆಕರ್ಷಿಸುತ್ತವೆ. ಗುಣಾರ್ಹತೆಯಿಲ್ಲದ ಮೊಕದ್ದಮೆಗಳಲ್ಲಿ ಏಕಪಕ್ಷೀಯ ಒತ್ತಡಕ್ಕೆ ಮಣಿಯುವ ನ್ಯಾಯಾಧೀಶನು, ನ್ಯಾಯಿಕ ಪ್ರಕ್ರಿಯೆಯನ್ನು ಅಪಮೌಲ್ಯಗೊಳಿಸಲು ಸಹಾಯ ಮಾಡುತ್ತಾನೆ. ಶ್ರೀ ರಾಮಶೇಷ ಅವರ ನಿಷ್ಪಕ್ಷಪಾತತೆಗಾಗಿ ಮತ್ತು ಸರಿಯಾದ ವಕಾಲತ್ತಿಗಾಗಿ ನಾವು ಪ್ರಶಂಸಿಸಲೇಬೇಕು."*

(ಗೆರೆ ಹಾಕಿದ್ದಕ್ಕೆ ಒತ್ತು ನೀಡಲಾಗಿದೆ)

15. ಸಂಬಂಧಪಟ್ಟ ಪಕ್ಷಕಾರನು ಇಂತಹ ಮೊಕದ್ದಮೆಯನ್ನು ನ್ಯಾಯಾಲಯದ ಮುಂದೆ ಪ್ರತಿನಿಧಿಸಲು ನ್ಯಾಯವಾದಿಯ ಮನವೊಲಿಸಿರುವುದರ ಬಗ್ಗೆ ಸರ್ವೋಚ್ಚ ನ್ಯಾಯಾಲಯವು ಅಸಮಾಧಾನವನ್ನು ವ್ಯಕ್ತಪಡಿಸಿದೆ. ಈ ಮೊಕದ್ದಮೆಯಲ್ಲಿ, ನಮ್ಮ ಮುಂದೆ ಯುವ ನ್ಯಾಯವಾದಿ ಇದ್ದು, ಆತನು ಸರ್ವೋಚ್ಚ ನ್ಯಾಯಾಲಯವು ವಿಧಿಸಿದ ನಿಯಮವನ್ನು ಅನುಸರಿಸಬೇಕು. ಮೇಲೆ ಹೇಳಿದ ನಿರ್ಣಯದ 7ನೇ ಕಂಡಿಕೆಯಲ್ಲಿ, ಸರ್ವೋಚ್ಚ ನ್ಯಾಯಾಲಯವು, ನ್ಯಾಯವಾದಿಗಳು ಅವಿಶ್ವಸನೀಯ ಕಕ್ಷಿದಾರರಿಂದ ಆಕರ್ಷಿತರಾಗುವುದನ್ನು ನಿರಾಕರಿಸಿ, ಸಂಪೂರ್ಣವಾಗಿ ಮೋಸದಿಂದ ಕೂಡಿದ ಮತ್ತು ಕ್ಷುಲ್ಲಕ ವ್ಯಾಜ್ಯವನ್ನು ಪರಿಶೀಲಿಸಿದರೆ, ಅದು ನ್ಯಾಯೋದ್ದೇಶದ ಈಡೇರಿಕೆಗೆ ಮೌಲ್ಯಯುತ ಕೊಡುಗೆಯಾಗಬಹುದು ಎಂದು ಹೇಳಿದಾಗ, ಅರ್ಜಿದಾರನ ಪರ ಹಾಜರಾದ ಮಾನ್ಯ ನ್ಯಾಯವಾದಿಗಳು ಪಾಠ ಕಲಿತಿದ್ದಾರೆ ಮತ್ತು ಅವರು ಇನ್ನು ಮುಂದೆ ಪರಿಷತ್ತಿನ ಸದಸ್ಯರು ಅನುಸರಿಸಬೇಕೆಂದು ಸರ್ವೋಚ್ಚ ನ್ಯಾಯಾಲಯವು ಏನು ನಿರೀಕ್ಷೆ ಇಟ್ಟುಕೊಂಡಿದೆಯೋ ಅದರಂತೆ ನಡೆದುಕೊಳ್ಳುವರೆಂದು ನಾವು ಆಶಿಸುತ್ತೇವೆ.

16. ಈ ನ್ಯಾಯಾಲಯಕ್ಕೆ ಸಂಬಂಧಪಡುವಷ್ಟರಮಟ್ಟಿಗೆ, ಅರ್ಜಿದಾರನು ವಿಷಯವು ಅಂತಿಮಗೊಂಡಿದೆ ಎಂಬ ಭಾವನೆಯನ್ನು ತಾಳಬಾರದು. ದಿನಾಂಕ: 23ನೇ ಡಿಸೆಂಬರ್, 2020ರ ತಮ್ಮ ಆದೇಶದಲ್ಲಿ ಮಾನ್ಯ ಏಕಪೀಠ ನ್ಯಾಯಾಧೀಶರು ದಾಖಲಿಸಿದ ರಿಟ್ ಅರ್ಜಿ ಸಂಖ್ಯೆ: 15239/2020ರಲ್ಲಿ ಎರಡನೇ ಪ್ರತಿವಾದಿಯಾಗಿರುವ ಅರ್ಜಿದಾರನು ಮಾಡಿಕೊಂಡ ನಿವೇದನೆಯನ್ನು ನಾವು ಉಲ್ಲೇಖಿಸಿದ್ದೇವೆ. ಅರ್ಜಿದಾರನು ಈ ಕೂಡಲೇ ಮಾನ್ಯ ಏಕಪೀಠ ನ್ಯಾಯಾಧೀಶರ ಮುಂದೆ ಹೋಗಿ, ಸದರಿ ನಿವೇದನೆಯನ್ನು ಹಿಂಪಡೆಯಬೇಕೆಂಬುದಾಗಿ ನಾವು ನಿರೀಕ್ಷಿಸುತ್ತೇವೆ. ಸದರಿ ನಿವೇದನೆಯನ್ನು ಹಿಂತೆಗೆದುಕೊಳ್ಳದಿದ್ದರೆ, ಅರ್ಜಿದಾರನ ವಿರುದ್ಧ ಸ್ವಯಂಪ್ರೇರಿತ ನ್ಯಾಯಾಲಯ ನಿಂದನಾ ವ್ಯವಹರಣೆಗಳನ್ನು ಪ್ರಾರಂಭಿಸುವ ಆಯ್ಕೆಯು ಸದಾ ಮುಕ್ತವಾಗಿರುತ್ತದೆ.

17. ಈಗ, ಅರ್ಜಿದಾರನ ಮೇಲೆ ವೆಚ್ಚಗಳನ್ನು ವಿಧಿಸುವ ಪ್ರಶ್ನೆಗೆ ನಾವು ಬರುತ್ತೇವೆ. ನಿನ್ನೆ, ಅರ್ಜಿದಾರನ ಪರ ಹಾಜರಾದ ಮಾನ್ಯ ನ್ಯಾಯವಾದಿಗೆ ಅರ್ಜಿಯಲ್ಲಿ ಮಾಡಿದ ಆರೋಪಗಳ ತೀವ್ರತೆ ಕುರಿತು ವಿವರಿಸಲು ಸ್ವಲ್ಪ ಕಾಲವನ್ನು ನಾವು ಕಳೆದಿದ್ದೇವೆ. ಇಂದು, ಅರ್ಜಿದಾರನು ಸ್ವಲ್ಪಮಟ್ಟಿನ ಪಶ್ಚಾತ್ತಾಪವನ್ನು ವ್ಯಕ್ತಪಡಿಸುವನೆಂದು ನಾವು ನಿರೀಕ್ಷಿಸಿದ್ದೆವು. ಪಶ್ಚಾತ್ತಾಪವನ್ನು ವ್ಯಕ್ತಪಡಿಸುವುದಕ್ಕೆ ಬದಲಾಗಿ, ರದ್ದುಗೊಳಿಸುವುದಕ್ಕಾಗಿ ಅಥವಾ ಹಿಂದೆ ಸರಿಯುವುದಕ್ಕಾಗಿ ಅರ್ಜಿ ಸಲ್ಲಿಸುವ ಮೂಲಕ ಆತನ ನ್ಯಾಯವಾದಿಯು ನಾವು ನಿರೀಕ್ಷಿಸಿದ ವಿಳಂಬ ತಂತ್ರವನ್ನು ಅಳವಡಿಸಿಕೊಳ್ಳುವ ಪ್ರಯತ್ನ ಮಾಡಿದ್ದಾರೆ. ಅರ್ಜಿದಾರನ ಪರ ಹಾಜರಾದ ಮಾನ್ಯ ನ್ಯಾಯವಾದಿಗೆ ಇಂಥ ತಂತ್ರಗಳನ್ನು ಸಹಿಸುವುದಿಲ್ಲ ಮತ್ತು ಹಿಂದೆ ಸರಿಯಲು ಅವಕಾಶ ನೀಡುವುದಿಲ್ಲ ಎಂಬುದನ್ನು ನಾವು ಮನದಟ್ಟು ಮಾಡಿಕೊಟ್ಟಾಗ ಮಾತ್ರವೇ, ನ್ಯಾಯವಾದಿಯು ಅರ್ಜಿಯನ್ನು ಹಿಂತೆಗೆದುಕೊಳ್ಳಲು ಜ್ಞಾಪನಪತ್ರವನ್ನು ಸಲ್ಲಿಸಿದ್ದಾರೆ.

18. ಆದುದರಿಂದ, 1,00,000/– ರೂ.ಗಳ ಮೊತ್ತವನ್ನು ನಿರ್ಧರಿಸಿ ಎಚ್ಚರಿಕೆ ನೀಡುವ ವೆಚ್ಚಗಳನ್ನು ಅರ್ಜಿದಾರನ ಮೇಲೆ ವಿಧಿಸಲು ಇದು ಸೂಕ್ತ ಮೊಕದ್ದಮೆಯಾಗಿದೆ. ವೆಚ್ಚಗಳ ಮೊತ್ತವನ್ನು ಕರ್ನಾಟಕ ರಾಜ್ಯ ಕಾನೂನು ಸೇವಾ

ಪ್ರಾಧಿಕಾರಕ್ಕೆ (ಕೆಎಸ್‌ಎಲ್‌ಎಸ್‌ಎ) ಸಂದಾಯ ಮಾಡುವುದು. ಈ ನ್ಯಾಯಾಲಯದ ನಿರ್ದೇಶನಗಳ ಮೇರೆಗೆ, ಬೆಂಗಳೂರು ನಗರದಲ್ಲಿನ ಟ್ರಾಫಿಕ್ ಸಿಗ್ನಲ್‌ಗಳ ಬಳಿ ಗೊಂಬೆಗಳು ಮತ್ತು ಇತರ ವಸ್ತುಗಳನ್ನು ಮಾರಾಟ ಮಾಡಲು ಒತ್ತಾಯಕ್ಕೀಡಾಗಿರುವ ಮಕ್ಕಳಿಗೆ ನೆರವು ನೀಡುವ ಮತ್ತು ಸಹಾಯ ಮಾಡುವ ಕಾರ್ಯಚಟುವಟಿಕೆಗಳಲ್ಲಿ ಸಹಕರಿಸುವಂತೆ ರಾಜ್ಯ ಕಾನೂನು ಸೇವಾ ಪ್ರಾಧಿಕಾರಕ್ಕೆ (ಕೆಎಸ್‌ಎಲ್‌ಎಸ್‌ಎ) ನಿರ್ದೇಶಿಸಲಾಗಿದೆ. ವೆಚ್ಚದ ಮೊತ್ತವನ್ನು ಸಂದಾಯ ಮಾಡಿದ ನಂತರ, ರಾಜ್ಯ ಕಾನೂನು ಸೇವಾ ಪ್ರಾಧಿಕಾರವು (ಕೆಎಸ್‌ಎಲ್‌ಎಸ್‌ಎ) ಅಂಥ ಮಕ್ಕಳ ಪ್ರಯೋಜನಕ್ಕಾಗಿ ಅದನ್ನು ಬಳಸಿಕೊಳ್ಳುವುದು. ಇದು, ಅರ್ಜಿದಾರನು 1,00,000/– ರೂ.ಗಳನ್ನು ತನ್ನ ಜೇಬಿನಿಂದ ಭರಿಸಿದರೂ, ಆ ಮೊತ್ತವು ಒಂದು ಒಳ್ಳೆಯ ಮತ್ತು ರಚನಾತ್ಮಕ ಉದ್ದೇಶಕ್ಕೆ ಬಳಕೆಯಾಗುವುದು ಎಂಬುದನ್ನು ಸುನಿಶ್ಚಿತಗೊಳಿಸುತ್ತದೆ.

19. ಅರ್ಜಿದಾರನು ತನ್ನ ಮೊಕದ್ದಮೆಯನ್ನು ಕರ್ನಾಟಕದವರಲ್ಲದ ನ್ಯಾಯಾಧೀಶರು ಆಲಿಸಬೇಕೆಂಬುದಕ್ಕೆ ಒತ್ತು ನೀಡಿದ್ದಾನೆ. ಅಂಥ ಪರಿಕಲ್ಪನೆಯೇ ಅಸ್ತಿತ್ವದಲ್ಲಿರುವುದಿಲ್ಲ. ಮುಖ್ಯ ನ್ಯಾಯಮೂರ್ತಿಯೂ ಸೇರಿದಂತೆ ಈ ನ್ಯಾಯಾಲಯದ ಪ್ರತಿಯೊಬ್ಬ ನ್ಯಾಯಾಧೀಶರೂ ಕರ್ನಾಟಕದ ನ್ಯಾಯಾಧೀಶರಾಗಿರುತ್ತಾರೆ.

20. ಆದುದರಿಂದ, ನಾವು ಈ ಮುಂದಿನ ಆದೇಶವನ್ನು ಹೊರಡಿಸುತ್ತೇವೆ:

(i) ಆದೇಶದಲ್ಲಿ ನಾವು ಉಲ್ಲೇಖಿಸಿರುವ, ಇಂದು ಸಲ್ಲಿಸಿದ ಜ್ಞಾಪನಪತ್ರದ ಹಿನ್ನೆಲೆಯಲ್ಲಿ, ಅರ್ಜಿಯನ್ನು ಬೇಷರತ್ತಾಗಿ ಹಿಂತೆಗೆದುಕೊಳ್ಳಲಾಗಿದೆ ಎಂಬುದಾಗಿ ವಿಲೇ ಮಾಡಲಾಗಿದೆ;

(ii) ರಾಜ್ಯ ಕಾನೂನು ಸೇವಾ ಪ್ರಾಧಿಕಾರಕ್ಕೆ (ಕೆಎಸ್‌ಎಲ್‌ಎಸ್‌ಎ) 1,00,000/– ರೂ.ಗಳಿಗೆ ನಿರ್ಧರಿಸಿದ ಪ್ರಮಾಣದ ವೆಚ್ಚಗಳನ್ನು ಸಂದಾಯ ಮಾಡುವಂತೆ ಅರ್ಜಿದಾರನಿಗೆ ನಾವು ನಿರ್ದೇಶಿಸುತ್ತೇವೆ;

(iii) ಈ ಹಿಂದೆ ಅಭಿಪ್ರಾಯಪಟ್ಟಿರುವಂತೆ, ವೆಚ್ಚದ ಮೊತ್ತವನ್ನು ಮೇಲೆ ನಾವು ನಿರ್ದಿಷ್ಟಪಡಿಸಿದ ಉದ್ದೇಶಕ್ಕಾಗಿ ಬಳಸತಕ್ಕದ್ದು;

(iv) ಅರ್ಜಿಯನ್ನು ವಿಲೆ ಮಾಡಲಾಗಿದೆಯಾದರೂ, ಅದನ್ನು ಅರ್ಜಿದಾರನು ಅನುಪಾಲಿಸಿರುವುದನ್ನು ವರದಿ ಮಾಡಲು ದಿನಾಂಕ: 19ನೇ ಫೆಬ್ರವರಿ 2021ರಂದು ಈ ನ್ಯಾಯಾಲಯದ ಮುಂದೆ ಪಟ್ಟಿ ಮಾಡತಕ್ಕದ್ದು;

(v) ನಾವು ಮೇಲೆ ಉಲ್ಲೇಖಿಸಿರುವ ದಿನಾಂಕ: 23ನೇ ಡಿಸೆಂಬರ್, 2020ರ ಆದೇಶದಲ್ಲಿ ದಾಖಲಿಸಿರುವ ಮಾನ್ಯ ಏಕಪೀಠ ನ್ಯಾಯಾಧೀಶರ ಮುಂದೆ ಅರ್ಜಿದಾರನು ನೀಡಿದ ಹೇಳಿಕೆಯನ್ನು ಹಿಂತೆಗೆದುಕೊಳ್ಳಲು ಆತನು ಕ್ರಮಗಳನ್ನು ಕೈಗೊಂಡಿರುವನೇ ಎಂಬುದನ್ನು ತಿಳಿಸಿ, ದಿನಾಂಕ: 19ನೇ ಫೆಬ್ರವರಿ, 2021ರಂದು ಈ ನ್ಯಾಯಾಲಯಕ್ಕೆ ವರದಿ ಸಲ್ಲಿಸಲು ವಿಲೇಖನಾಧಿಕಾರಿಯವರಿಗೆ (ನ್ಯಾಯಿಕ) ನಾವು ನಿರ್ದೇಶಿಸುತ್ತೇವೆ.

(vi) ಸದರಿ ಹೇಳಿಕೆಯನ್ನು ಹಿಂಪಡೆಯಲು ಅರ್ಜಿದಾರನಿಗೆ ನಾವು ಒತ್ತಾಯ ಮಾಡುತ್ತಿಲ್ಲವಾದರೂ, ಕಾರಣಗಳನ್ನು ದಾಖಲಿಸುವಾಗ, ಸದರಿ ಹೇಳಿಕೆಯನ್ನು ಹಿಂಪಡೆಯದಿದ್ದರೆ ಆಗುವ ಪರಿಣಾಮಗಳ ಬಗ್ಗೆ ಅರ್ಜಿದಾರನಿಗೆ ನಾವು ಈಗಾಗಲೇ ಅರಿವು ಮೂಡಿಸಿದ್ದೇವೆ ಎಂಬುದನ್ನು ನಾವು ಸ್ಪಷ್ಟಪಡಿಸುತ್ತೇವೆ.

(vii) ರಿಟ್ ಅರ್ಜಿ ಸಂಖ್ಯೆ: 15239/2020ರ ಕಡತವನ್ನು ಹಿಂತಿರುಗಿಸುವುದು.

---